





ಒಬ್ಬರು ನೋಡಿ ಪೆಚ್ಚು ಪೆಚ್ಚಾಗಿ ನಕ್ಕಿದ್ದೆವು.

ಒಳಗೆ ದೊಡ್ಡ ದೊಡ್ಡ ಪಾರ್ಕುಗಳಲ್ಲಿ ಹುಲಿಗಳನ್ನು ಬಿಟ್ಟಿದ್ದಾರೆ. ಅವುಗಳ ಜೊತೆ ಕೆಲವು ಯಾತ್ರಿಗಳು ಆರಾಮವಾಗಿ ಕುಳಿತು, ಹುಲಿಗಳನ್ನು ಮುಟ್ಟಿ ಫೋಟೊ ತೆಗೆದುಕೊಳ್ಳುತ್ತಿರುವುದನ್ನು ನೋಡಿ ಸ್ವಲ್ಪ ಧೈರ್ಯ ಬಂದಂತಾಯಿತು. ಆದರೂ ಹುಲಿ ಹುಲಿಯೇ! ಮುಖದಲ್ಲಿ ಅದೇ ಕ್ರೌರ್ಯ, ನಡಿಗೆಯಲ್ಲಿ ಅದೇ ಗಾಂಭೀರ್ಯ.

ಅಲ್ಲಿಯ ಸಹಾಯಕರು ನಮ್ಮಿಬ್ಬರನ್ನೂ ಎರಡು ಹುಲಿಗಳಿದ್ದ ಪಾರ್ಕಿನ ಗೇಟಿನ ಬಳಿ ನಿಲ್ಲಿಸಿದರು. ಆಗಲೇ ಒಳಗಡೆ ಇಬ್ಬರು ಸಹಾಯಕರಿದ್ದರು. 'ಹುಲಿಯ ಮುಂದೆ ಹೋಗಬಾರದು ಮತ್ತು ಹೊಟ್ಟೆಯಿಂದ ಮುಂದೆ ಹಾಗೂ ಮುಖವನ್ನು ಮುಟ್ಟಬಾರದು' ಎಂದು ಹೇಳಿ ಒಳಗಡೆ ಬಿಟ್ಟರು.

ಧೈರ್ಯವಾಗಿ ಒಳಗೆ ಹೆಜ್ಜೆಯಿಟ್ಟವರಿಗೆ ಸಿಕ್ಕಿದ್ದು, ಮಲಗಿರುವ ಹುಲಿ. ಮುಟ್ಟಲು ಭಯಪಡುತ್ತಿರುವ ನಮಗೆ 'ಮುಟ್ಟಿ, ಭಯಪಡಬೇಡಿ' ಎಂದು ಸಹಾಯಕನೇ ಧೈರ್ಯ ಹೇಳಿದ. ಮೊದಲು ಹುಲಿಯ ಬಾಲ ಮುಟ್ಟಿದ ನನಗೆ ಮೈಯೆಲ್ಲ ಪುಳಕಗೊಂಡಿತ್ತು. ಹುಲಿ ಒಮ್ಮೆ ಕಣ್ಣು ಬಿಟ್ಟಾಗ ಕೈ ಹಿಂದಕ್ಕೆ ತೆಗೆದುಕೊಂಡಿದ್ದೆ. 'ಅದೇನೂ ಮಾಡಲ್ಲ, ಆರಾಮಾಗಿ ಮುಟ್ಟಿ' ಎಂದು ತನ್ನ ಅರೆಬರೆ ಇಂಗ್ಲಿಷ್‌ನಲ್ಲಿ ಸಹಾಯಕ ಹೇಳಿದಾಗ ಧೈರ್ಯವಾಗಿ ಬೆನ್ನು ಸವರಿದ್ದೆ. ಜೊತೆಗೆ ನನ್ನ ಹೆಂಡತಿಯೂ ಸಾಥ್ ಕೊಟ್ಟಿದ್ದಳು.

ಸಹಾಯಕ ಧೈರ್ಯ ಕೊಟ್ಟ ಹಾಗೆ ಒಮ್ಮೆ ಹುಲಿಯ ಬೆನ್ನ ಮೇಲೆ ಸಾವಕಾಶವಾಗಿ ಮಲಗಿದೆ ಕೂಡ. ಮೈ ಭಾರವನ್ನು ಅದರ ಮೇಲೆ ಹಾಕುವ ಧೈರ್ಯ ಮಾಡಲಿಲ್ಲ. ನನ್ನಾಸೆಯಂತೆ ಅದರ ಬಾಲವನ್ನು ಗಡ್ಡಕ್ಕೊಮ್ಮೆ ಉಜ್ಜಿದ್ದೆ, ಹೊಟ್ಟೆಯ ಕೆಳಭಾಗದ ಅದರ ಉಣ್ಣೆಯಂತಹ ಕೂದಲಿನಲ್ಲೊಮ್ಮೆ ಕೈ ಆಡಿಸಿದ್ದೆ. ಯಾವುದನ್ನು ಅಸಾಧ್ಯ ಅಂದುಕೊಂಡಿದ್ದೆನೋ ಅದು ಇಲ್ಲಿ ಸಾಧ್ಯವಾಗಿತ್ತು. ಈಗ ಹುಲಿ ಒಮ್ಮೆ ಎದ್ದು ನಿಂತು ತನ್ನ ಮುಂದಿನ ಕಾಲನ್ನು ನೆಲಕ್ಕೊತ್ತಿ, ಉಗುರನ್ನು ಕಪ್ಪಿಸಿ, ಮೈಯನ್ನೊಮ್ಮೆ ಹಿಂದಕ್ಕೆ ಎಳೆದುಕೊಂಡಿತ್ತು. ಅದರ ಉಗುರು, ಕಾಲು, ಉದ್ದನೆಯ ಶರೀರವನ್ನೊಮ್ಮೆ ಹತ್ತಿರದಿಂದ ನೋಡಿದ್ದಾಯಿತು. ಅದು ಎದ್ದು ನಿಂತಾಗಲೂ ಅದರ ಜೊತೆ ಕೆಲವೊಂದು ಫೋಟೊಗಳನ್ನು ಕ್ಲಿಕ್ಕಿಸಿಕೊಂಡಾಯಿತು. ಸುಮಾರು 15 ನಿಮಿಷಗಳ ನಮ್ಮ ಅವಧಿ ಮುಗಿದಿತ್ತು, ಹೊರಗೆ ಬಂದಿದ್ದೆವು.

ಹೊರಗೆ ಬಂದಾಗ ಮನಸ್ಸಿನಲ್ಲಿ ಅದೇನೋ ಮಿಶ್ರ ಭಾವನೆಯಿತ್ತು. ಜೀವನದಲ್ಲಿ ಏನು ಸಾಧ್ಯವಿಲ್ಲ ಅಂದುಕೊಂಡಿದ್ದೆನೋ ಅದನ್ನು ಸಾಧಿಸಿದ ಖುಷಿ ಒಂದೆಡೆಯಾದರೆ, ಅಡವಿಯಲ್ಲಿರಬೇಕಾದ ಈ ಹುಲಿಗಳನ್ನು ಇಲ್ಲಿ ಹಿಡಿದಿಟ್ಟು ಕಷ್ಟ ಕೊಡುತ್ತಿದ್ದಾರೇನೋ ಎಂದೂ ಅನ್ನಿಸಿತು. ಕೊನೆಗೆ ತಿಳಿದಿದ್ದು, ಹೆಚ್ಚಿನವು ಇಲ್ಲೇ ಹುಟ್ಟಿ ಬೆಳೆದ ಹುಲಿಗಳು, ಅವುಗಳಿಗೆ ಸರಿಯಾದ ಆಹಾರ ಕೊಟ್ಟು ಸಾಕಿದ್ದಾರೆ ಎನ್ನುವುದು.

ಸುಮಾರು 20 ವರ್ಷಗಳಿಂದ ಇವರು ಬೇರೆ ಬೇರೆ ಮೂರು ಕಡೆಗಳಲ್ಲಿ ಒಟ್ಟು ಸುಮಾರು 300 ಹುಲಿಗಳನ್ನು ಬೆಳೆಸಿ ಸಾಕುತ್ತಿದ್ದಾರೆ. ಅವುಗಳನ್ನೆಲ್ಲ ಅಡವಿಯಲ್ಲಿ ಬಿಡಲು ಮನುಷ್ಯರಾದ ನಾವು ಅಷ್ಟೊಂದು ಕಾಡನ್ನು ಬಿಟ್ಟಿರುವುದಾದರೂ ಎಲ್ಲಿ? ಹಾಗೆಂದು ಮನಸ್ಸಿನಲ್ಲೇ ಅಂದುಕೊಂಡು ನೆಮ್ಮದಿಯ ಉಸಿರುಬಿಟ್ಟಿದ್ದೆ.

ಪ್ರತಿಕ್ರಿಯಿಸಿ: feedback@sudha.co.in